Rega No M 1229

43rd Year | Sri 'Satyavadi' Mysore

11—3—1959

Doc. 8
7-2-2

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

# ಸತ್ಯವಾದಿ

ಸ್ಥಾಪಕರು— ಅರಮನೆ ಸಿಂಹೇದಾರ್ ಎಂ. ಎ ಸುಬ್ಬರಾಯುರು [ಬಿಡಿ ಪ್ರತಿ3ಪೈ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

## ದೋಣಿ ಮುಳುಗಿ ಗಂಗಾನದಿಯಲ್ಲಿ ಹತ್ತು ಜನರ ಜಲಸಮಾಧಿ

ವಾರಣಾಸಿ 10 — ಇಲ್ಲಿಗೆ 3 ಮೈಲಿಗಳ ದೂರವಿರುವ ರಾಜಘಾಟಿನ ಬಳಿ ಗಂಗಾನದಿಯಲ್ಲಿ ತೊಲೆಯೊಂದಕ್ಕೆ 50 ಆಂಧ್ರ ಯಾತ್ರಿಕರು ಇದ್ದ ದೋಣಿಯೊಂದು ಬಡಿದು ಅನಾಹುತವಾಗಿ 4 ಮಹಿಳೆಯರು ಮತ್ತು 3 ಮಕ್ಕಳು ಸೇರಿ ಒಟ್ಟು 10 ಜನ ಮರಣಹೊಂದಿದರು.

## ಫಿರೋಜ್ ವಿರೋಧ

ನವ ದೆಹಲಿ 10 — ಪಾರ್ಲಿಮೆಂಟರಿ ಕಾಂಗ್ರೆಸು ಪಕ್ಷದಲ್ಲಿ ತೆರಿಗೆ ವಿಧಿಸಬೇಕೆಂಬ ಸೂಚನೆಯನ್ನು ಫಿರೋಜ್‌ಖಾನ್ ಗಾಂಧಿ ವಿರೋಧಿಸಿರುವರೆಂದು ಗೊತ್ತಾಗಿದೆ

## ರಾಜೀನಾಮೆ ಕೊಡಲಿ

ಎರ್ನಾಕುಲಂ 10 — ಕಾಂಗ್ರೆಸು ಪಕ್ಷದ ನಾಯಕ ಶ್ರೀ ಪಿ ಟಿ ಚಾಕೊರವರು ಹೇಳಿಕೆಯೊಂದು, ಆಂಧ್ರ ಅಕ್ಕಿ ವ್ಯವಹಾರದಲ್ಲಿ ಕಂಬಾ ನಪ್ಪ ಆಗಿದೆ ಎಂದು ಮಂತ್ರಿ ಮಂಡಲ ರಾಜೀನಾಮೆ ಕೊಡಬೇಕೆಂದು ತಿಳಿಸಿದರು

## ಬೌದ್ಧ ಮತದ ಅವನತಿ

ಕೊಚ್ಚಿಯಿ 9 — ಕರುಣರು ಬೌದ್ಧಧರ್ಮದಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿರುವುದೇ ಆ ಮತ ಇಳಿಮುಖ ಆಗ್ಲು ಸಂದು ವರದಿ

## ವಿಫಲ

ಬೆಳಗಾಂ 9 — ಈ ದಿನ ಹರತಾಳ ನಡೆಸುವಂತೆ ಏಕೀಕರಣ ಸಮಿತಿ ಕರೆ ಇತ್ತಿದ್ದು ಪೂರ್ಣ ವಿಫಲವಾಯಿತು ವ್ಯಾಪಾರ ಕಾರ್ಯ ಪ್ರತಿದಿನದಂತೆ ನಡೆಯಿತು.

## ನೈತಿಕ ವಿರೋಧ

ಮೈಸೂರು 10 — ಪಾಕಿಸ್ತಾನ ಅಮೇರಿಕಾ ಸೇನಾ ಒಪ್ಪಂದ ನೈತಿಕ ಕಾನೂನಿಗೆ ವಿರೋಧ ಮತ್ತು ಯುದ್ಧ ಎನ್ನು ನಮ್ಮ ಪ್ರತೀಶಕ್ಕೆ ತಂದಿದೆ ಎಂಬುದಾಗಿ ಈ ಸಾಜೆ ಪುರಭವನ ಮೈದಾನದಲ್ಲಿ ಭಾಷಣಮಾಡುತ್ತಾ ಭಾರತ ರಕ್ಷಣಾ ಮಂತ್ರಿ ಶ್ರೀ ವಿ ಕೆ ಕೃಷ್ಣಮೆನನ್ ತಿಳಿಸಿದರು

### ಪರಿಶೀಲನೆಯಲ್ಲಿ

ನವ ದೆಹಲಿ 9 — ಖಾಸಗಿ ಸರ್ಕಾರಿ ನೌಕರನಿಂದ ಸಹಾಯ ಪಡೆಯುವ ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಯ ನಡವಳಿಕೆ ಅಸಂಬದ್ಧವೆಂದು ಚುನಾವಣೆ ಕಾನೂನನ್ನು ಮಾಡುವ ಅಂಶ ಸರ್ಕಾರಿ ಪರಿಶೀಲನೆಯಲ್ಲಿದೆ

## ಗಡೀಪಾರು

ಕಾರವಾರ 4 — ಆಹಾರ ಮತ್ತಿತರ ಅಗತ್ಯ ಪದಾರ್ಥಗಳನ್ನು ಭಾರತದಿಂದ ಅಕ್ರಮವಾಗಿ ಗೋವಾಕ್ಕೆ ಸಾಗಿಸುತ್ತಿದ್ದ ಅರೋಪದ ಮೇಲೆ ಬುಡ್ಡ ಷೇಕ ಬುದ್ದಲ್ಲ ಮತ್ತಿತರ 7 ಮಂದಿಯ ಮೇಲೆ ಗಡಿಪಾರು ಆಜ್ಞೆ ಮಾಡಿದೆ

## ಬಹುಮಾನ ವಿನಿಯೋಗ

ಮೈಸೂರು ಶ್ರೀಮನ್ಮಹಾರಾಜರವರ ಅಂಡರ್ ಸೆಕ್ರೆಟರಿಯವರಾದ ಶ್ರೀ ಸಿ. ರಾಮಸ್ವಾಮಿ, ಬಿ ಎ. ರವರು ಪಾಂಡವಪುರ ತಾ| ಮಾದೇಶ್ವರ ದೇವಾಲಯದ ಬಳಿಯ ಬೇಬಿ ಕಾವಲಿನಲ್ಲಿ ಬೇಬಿ ಶಿವಂಪಾತ್ರಿ ಜಾತ್ರೆ ಸಂಬಂಧದಲ್ಲಿ ಏರ್ಪಾಟಾಗಿದ್ದ ದನಗಳ ಪ್ರದರ್ಶನದ ಬಹುಮಾನ ವಿನಿಯೋಗವನ್ನು ನಾಳೆ ಸಂಜೆ 5 ಗಂಟೆಗೆ ನೆರವೇರಿಸಲು ಕೃಪೆಯಿಟ್ಟು ಒಪ್ಪಿದ್ದಾರೆ.

## ಮೋಟಾರಿಗೆ ಸಿಕ್ಕಿ ಬಾಲಕನ ಮರಣ

ಬೆಂಗಳೂರು 10 — ಈ ಮಧ್ಯಾಹ್ನ ವಿಶ್ವೇಶ್ವರಪುರಂ ಡಯಾಗನಲ್‌ಸ್ಟ್ರೆಯಲ್ಲಿ ಮೋಟಾರುಕಾರು ಹರಿದು 5 ವರ್ಷದ ಬಾಲಕನೋರ್ವ ಸತ್ತನು ಅದೇ ಪ್ರದೇಶದಲ್ಲಿ ವಾಸಿಸುತ್ತಿದ್ದ ಶ್ರೀ ಲಕ್ಷ್ಮಣ ಶೆಟ್ಟಿಯವರ ಮಗ ಶ್ರೀನಿವಾಸನೆಂಬುದಾಗಿ ಬಾಲಕನ ಕೆಸರು

### ಗುಡಿಸಲಿಗೆ ಬೆಂಕಿ

ಬೆಂಗಳೂರಿನ ಸಿವಿಲ್ ಪ್ರದೇಶದ ಗುಡಿಸಲೊಂದಕ್ಕೆ ವಿದ್ಯುತ್ ಬಲ್ಬ್ ಸಿಡಿದ ಕಾರಣ ಬೆಂಕಿ ಹೊತ್ತಿಕೊಂಡು ಸುತ್ತಮುತ್ತ ಜನರ ಮತ್ತು ಅಗ್ನಿ ಶಾಮಕ ಯಂತ್ರದವರ ಸಹಾಯದಿಂದ ಆರಿಸಲಾಯಿತು.

## ಮೂವರ ಸಾವು

ಪುಣೆ 10 — ಕಳೆದ ಸಂಜೆ ಇಲ್ಲಿಗೆ 20 ಮೈಲಿಗಳ ದೂರವಿರುವ ಪುಣೆ-ಷಿಂಗಡ್ ರಸ್ತೆಯಲ್ಲಿ ಹಾಲಿನ ವ್ಯಾನ್ ತಲೆಕೆಳಗಾಗಿ 3 ಜನರು ಸಕ್ಕು 10 ಜನರು ಗಾಯಗೊಂಡರು

### ಪೋಲೀಸಿನ ಮರಣ

ಜುರಿಯಾ 9 — ಇಲ್ಲಿಗೆ ಹತ್ತಿರದ ಗ್ರಾಮದ ವರ್ತಕನೋರ್ವನ ಮನೆಯ ಮೇಲೆ 25 ಧಕಾಯಿತರು ಧಾಳಿ ಮಾಡಿದ್ದಾಗ ಗುಂಡು ಹಾರಿಸಲು ಓರ್ವ ಕಾನ್‌ಸ್ಟೆಬಲು ಸೇರಿ ಈರ್ವರು ಮರಣ ಹೊಂದಿದರು.

× ಕಾರವಾರ 9 — ವಿ.ಹಾನಿಪ್ಪ ಏಕೀಕರಣ ಸಮಿತಿಯ ಕರೆಯಂತೆ ಕಾರವಾರ ಅದರ ಸುತ್ತಮುತ್ತ ಹರತಾಳ ನಡೆಯಿತು

## ಅಧ್ಯಕ್ಷರಿಲ್ಲದೆ ಸಭೆ

ವಿಜಯವಾಡಾ ಪುರಸಭೆಯ 18 ಸದಸ್ಯರು ಕೋವುವಾದ್ಯವಿಶೇಷ ಸಭೆಯನ್ನು ನಡೆಸಿ ಅಧಿಕಾರ ದುರುಪಯೋಗದ ಕಾರಣ ಅಧ್ಯಕ್ಷರನ್ನು ತೆಗೆಯಬೇಕೆಂದು ನಿರ್ಣಯಿಸಿದರು ಈ ಸಭೆಯನ್ನು ಅಧ್ಯಕ್ಷರು ಭಂಗಮಾಡಿದ್ದರೂ ಸದಸ್ಯರು ನಡೆಸಿದರು

### ವಿಧವೆ ಬೇಡಿಕೆ

ಅಕೋಲಾ 9 — ಪತ್ನೀಕ ವಿದ್ಯೆ ರಜನೆ ಆಗಬೇಕೆಂದು ಬೊಂಬಾಯಿ ವಿಧಾನ ಸಭೆ ಕಾಂಗ್ರೆಸು ಪಕ್ಷದ ಸದಸ್ಯರಾದ ಶ್ರೀ ಬಿ ಜಲಾಲ ಬ್ರಿಯಾನಿ ತಿಳಿಸಿದ್ದಾರೆ.

### ಸತ್ಕಾರಕೂಟ

ಮೈಸೂರು 10 — ಭಾರತ ರಕ್ಷಣಾ ಮಂತ್ರಿ ಶ್ರೀ ವಿ ಕೆ ಕೃಷ್ಣಮೆನನ್‌ರಿಗೆ ಗೌರವಾರ್ಥ ಮೈಸೂರು ಪೌರಸಭೆ ಈ ಸಂಜೆ ಸತ್ಕಾರಕೂಟವೇರ್ಪಡಿಸಿತ್ತು. ಪುರಸಭಾಧ್ಯಕ್ಷ ಶ್ರೀ ಬಿ ಪಿ ಕೆಂಗೇಗೌಡರು ಸ್ವಾಗತ ಭಾಷಣ ಮಾಡಿದರು

### ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂದಕ್ಕಷ್ಣಜೋಯಿಸರಿಂದ
12 ತೃತೀಯಾ ರೇವತಿ

---

ಮಡಿಕೇರಿ 10 — ಮಡಿಕೇರಿಯಿಂದ ಮೈಸೂರಿಗೆ ಬರುತ್ತಿದ್ದ ಸಾಲಂಜಿ ಮೋಟಾರು ಸರ್ವಿಸ್ ಸಿದ್ದಾಪುರದಾಚೆ ಮಂಕ್ಕೆ ಡಿಕ್ಕಿ ಬಡಿದು ಓರ್ವ ಸಕ್ಕು 22 ಜನರು ಗಾಯಗೊಂಡರು.

ಬೊಂಬಾಯಿ 10 — ಡಾ|| ಎಂ ಆರ್ ಜಯಕರ್ ನಿಧನಂತಾದರು

## ಇದು ಯಾರ ಕಿಡಿಗೇಡಿತನ ?

ಮೈಸೂರು ಸಂಸ್ಥಾನದವರು ಪ್ರತಿಯೊಂದು ಮೈಲುಗಲ್ಲಿನ ಮೇಲೆ ಬರೆದ ಕನ್ನಡ ಅಕ್ಷರಗಳನ್ನು ಕೆಲವು ಕಡೆ ಹುಲ್ಲಿ ಯಾರೋ ಕಿಡಿಗೇಡಿಗಳು ಅಳಿಸಿಬಿಟ್ಟಿದ್ದಾರೆ ; ಕಾಕತಿ ಮತ್ತ ಬಾಳೆಕುಂದ್ರಿ ಊರುಗಳನ್ನು ತೋರಿಸುವ ಕನ್ನಡ ಬೋರ್ಡುಗಳನ್ನು ಯಾರೋ ಕಿಡಿಗೇಡಿಗಳು ಅಳಿಸುವುದಾಗಿ ತಿಳಿಯುತ್ತದೆ ; ಅಧಿಕಾರಿಗಳು ಕಿಡಿಗೇಡಿಗಳನ್ನು ಕಂಡುಹಿಡಿಯುವಂತಾಗಿ ನಾವಿದ್ದೇವೆ [ಠಂ]

## ಪ್ರೆಸ್ಸು ಬಟನ್ನುಗಳ ಜಪ್ತಿ

ದಿ. ೦೦೦ ಟಿಲಕವಾಡಿಯ ಓರ್ವನು ಗೋವಾದಿಂದ ಕಳ್ಳ ಮಾರ್ಗವಾಗಿ ತಂದ 350 ರೂ ಬೆಲೆ ಬಾಳುವ 48 ಪಾಕೆಟ್ ಪ್ರೆಸ್ ಬಟನ್ನುಗಳನ್ನು ಕೈ ಚೀಲದಲ್ಲಿ ಹಾಕಿ ಸೈಕಲ್ ಮೇಲಿಂದ ಹೋಗುವಾಗ ಖಂಜರಗಲ್ಲಿ ಮತ್ತು ರಿಸಾಲದಾರಗಲ್ಲಿಯ ನಡುವೆ ಕ್ಯೂಂ ಬ್ರಾಂಚು ಪೋಲೀಸರು ಅತನನ್ನು ಸಂಶಯದಿಂದ ತಡೆದು ತಪಾಸಣೆ ಮಾಡಲಾಗಿ ಮೇಲಿನ ಮಾಲು ದೊರೆಯಿತು : ಕೂಡಲೆ ಪೋಲೀಸರು ಅತನನ್ನು ಕಸ್ಟಂಸ್ ಪೋಲೀಸರ ವಶಕ್ಕೆ ಒಪ್ಪಿಸಿರುವುದಾಗಿ ತಿಳಿಯುತ್ತದೆ — ದಿ 5 ಮುಂಜಾನೆ ಸಿಟಿ ಪೋಲೀಸರು ರಿಸಾಲದಾರಗಲ್ಲಿಯಲ್ಲಿ ಓರ್ವನ ಮನೆ ಝಡತಿ ಮಾಡಲಾಗಿ ಗೋವಾದಿಂದ ಕಳ್ಳಮಾರ್ಗವಾಗಿ ತಂದ ಸು. 400 ಬೆಲೆ ಬಾಳುವ 21 ಗ್ರೋಸು ಪ್ರೆಸ್‌ಬಟನ್ನು ದೊರೆಯಿತು ; ಪೋಲೀಸರು ಅದನ್ನು ಜಪ್ತಿಮಾಡಿರುವುದಾಗಿ ತಿಳಿಯುತ್ತದೆ.

## ಭೂ ಒಡೆಯರ ಪರಿಷತ್ತು

ಬೆಳಗಾವಿನಲ್ಲಿ ಈ ತಿಂಗಳು ಪ್ರಾರಂಭದಲ್ಲಿ ನಡೆದ ಭೂ ಒಡೆಯರ ಪರಿಷತ್ತಿನಲ್ಲಿ ಅನೇಕ ಗೊತ್ತುವಳಿಗಳುಪಾಸಾದವು ; ಆ ಪೈಕಿ — ನಾಗಪುರ ಕಾಂಗ್ರೆಸ್ಸು ಅಧಿವೇಶನದಲ್ಲಿ ಭೂ ಸುಧಾರಣೆಯ ಬಗ್ಗೆ ಮಾಡಿದ ಗೊತ್ತುವಳಿಯು ಅತಿಶಯ ಕ್ರಾಂತಿಕಾರಕವಿದ್ದು ಕಮ್ಯುನಿಸ್ಟು ವಾತಾವರಣವನ್ನು ನಿರ್ಮಿಸಿದಂತಾಗುವುದು, ಒಕ್ಕಲತನದಲ್ಲಿ ತೊಡಗಿದ ಸುಮಾರಕ್ಕೆ 83 ಶಷ್ಟು ಒಕ್ಕಲಿಗರು ಸರಕಾರದ ಈಗಿನ ಧೋರಣದಿಂದ ನಿರುದ್ಯೋಗಿಗಳಾಗುವರು, ಎಂಬುದು ಒಂದು ನಿರ್ಣಯ — ಭೂಮಿಯು ಕ್ಷೇತ್ರದ ಮೇಲೆ ತಿಲ್ಲವೆ ಸ್ವಂತ ಸಾಗುವಳಿಯ ಭೂಮಿಯು ಭೂಮಿಯು ಮೇಲೆ ನಿರ್ಬಂಧ ಹಾಕುವುದರಿಂದ ಏನೂ ಪ್ರಯೋಜನವಿಲ್ಲ, ಎಂಬುವುದು ಮತ್ತೊಂದು ನಿರ್ಣಯ — ಭೂ ಹಿಡುವಳಿಯ ಮೇಲಿನ ನಿರ್ಬಂಧನವನ್ನು ಈ ಪರಿಷತ್ತು ಒಲವಾಗಿ ವಿರೋಧಿಸುತ್ತದೆ , ಎಲ್ಲರ ಜೀವನದ ಮಟ್ಟವು ಸುಧಾರಿಸುವವರೆಗೆ ಭೂಮಿಯ ಮೇಲೆ ನಿರ್ಬಂಧನಿರಕೂಡದು ; ನಿರ್ಬಂಧ ಹಾಕುವುದೇ ಆದರೆ, ಧಾರ್ಮಿಕ, ಶೈಕ್ಷಣಿಕ ಮತ್ತ ದಾನ ಹಾಗೂ ಧರ್ಮಿಕ ಸಂಸ್ಥೆಗಳ ಭೂಮಿಗಳ ಮೇಲೆ ಹಾಕಬಾರದು, ಎಂಬುದು ಮತ್ತೊಂದು ನಿರ್ಣಯ.

## ಪಕ್ಕದ ಚಿತ್ರ

ಹಿರಿಯಳಿಂಕ ಮರಗೆಲಸದವರಾಗಿದ್ದು ಸಂಸಾರದ ಆಹಾರಕ್ಕಾಗಿ ಬೇಟೆಯಲ್ಲಿಯೇ ನಿರತರಾಗಿರುತ್ತಿದ್ದರು : ದಯಾಮಯಿ ತಾಯಿಯು ಅವಿ, ಅತನ ಸಹೋದರ ಮತ್ತು ವೃದ್ಧರಾಯರ ಜವಿಾನನ್ನು ನೋಡಿಕೊಳ್ಳಬೇಕಾಗಿತ್ತು.

ಹತ್ತಿಂದಲ್ಲೇ ಸ್ಕೂಲು ತೆಗೆಯುಲ್ಪಟ್ಟನಂತರ ಇವರನ್ನು ತಾಯಿಯು ಅಲ್ಲಿಗೆ ಸೇರಿಸಿ, ಓದಿ ಬರೆಯುವ ಒಳ್ಳೇ ಜ್ಞಾನ ಪಡೆಯುವಂತೆ ಬೋಧಿಸಿದಳು.

ಏಬ್ರಹಂಗೆ 7 ವರ್ಷವಾಗಿದ್ದಾಗ ಅತನ ತಂದೆ ಇಂಡಿಯಾನಾದ ಒಂದು ವ್ಯವಸಾಯದ ಜವಿಾನಿಗೆ ಸಂಸಾರ ಸಮೇತ ತೆರಳಿದನು.


ಎಲ್ಲ ವಿಧದ ಜಯುರ್ವೇದ ಔಷಧಗಳಿಗೂ **For Quality Printing**

ಅ ಶೋ ಕಾ ಫಾ ರ್ಮ ಸಿ

ಕೃಷ್ಣರಾಜೇಂದ್ರ ಮೈಸೂರು

**L. N. Press**

Sivarampet, Mysore

# ವುಡ್‌ಲಾಂಡ್ಸ್ ತೇಜಸ್ವಿ 6 ನೇ ವಾರ

ಸಂಗೀತಪೂರ್ಣ ಹಾಸ್ಯಮಯ ಚಿತ್ರ — ನೀರಿನ ನೃತ್ಯಗಳು ಗೇವಾಕಲರಿನಲ್ಲಿ

# ದಿಲ್ಲೀ – ಕ – ಥಗ್ (ಹಿಂದಿ)

ತಾರಾಗಣ– ನೂರ್ಜ, ಕಿಶೋರ್, ಸ್ಮೃತಿಬಿಸ್ವಾಸ್ | ದಿನ 3 ಪ್ರದರ್ಶನಗಳು

# ಅಪೆರಾ— ಜಯಪ್ರದ 2 ನೇ ವಾರ

# ಮಾಧವಿ

ನಟವರ್ಗ— ಎಸ್. ಜಾನಕಿ, ದೇವಿಕ, ಮನೋಹರ

ಮನಮೋಹಕ ತಮಿಳು ಚಿತ್ರ — — ಪ್ರತಿದಿನ 3 ಆಟಗಳು

ಗೋರಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ಪಡೆ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ


Edited, Printed & Published by Dharma Prachara Nur... Krishna Rao, at the Satyavadi Press Chamarajapuram, ...